ಓ ಎಸ್ **319/2021**

ಡಿ ಡಬ್ಲ್ಯೂ **-1**

**ದಿಃ 17.07.2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಜಿ ವಕೀಲರಿಂದಃ

ಐಟಂ ನಂಬರ್ 2 ರ ಸ್ವತ್ತನ್ನು ನನ್ನ ತಂದೆಯವರು 15.11.1971 ರಲ್ಲಿ ಕ್ರಯಕ್ಕೆ ಪಡೆದಿರುವ ಸ್ವತ್ತಾಗಿರುತ್ತದೆ ಎಂದು ಕೇಳಿದರೆ ಸಾಕ್ಷಿ ನನ್ನ ತಂದೆಯವರು ಖರೀದಿ ಮಾಡಿರುವುದಿಲ್ಲ, ನಾನು ಅದನ್ನು ಖರೀದಿ ಮಾಡಿ ಅದನ್ನು ನನ್ನ ತಂದೆಯವರ ಹೆಸರಿಗೆ ಬರೆಯಿಸಿರುತ್ತೇನೆ ಎಂದು ನುಡಿಯುತ್ತಾರೆ . ಸದರಿ ಕ್ರಯಪತ್ರ ನನ್ನ ತಂದೆಯವರ ಹೆಸರಿಗೆ ನೊಂದಣಿಯಾಗಿರುತ್ತದೆ ಎಂದರೆ ಸರಿ. ಸದರಿ ಕ್ರಯಪತ್ರದಲ್ಲಿನಾನು ದುಡಿದು ನನ್ನ ತಂದೆಯವರ ಹೆಸರಿನಲ್ಲಿ ಕ್ರಯಪತ್ರವನ್ನು ನೋಂದಣಿ ಮಾಡಿಸಿರುತ್ತೇನೆ ಎಂದು ಹೇಳಿರುವುದಿಲ್ಲ. ಐಟಂ ನಂಬರ್ 3 ದಿನಾಂಕಃ10.04.1978 ರಲ್ಲಿ ಕ್ರಯಕ್ಕೆ ಪಡೆದಿರುವ ಆಸ್ತಿ ಎಂದರೆ ಸರಿ . ಸದರಿ ಸ್ವತ್ತು ನನ್ನ ಹೆಸರಿಗೆ ನೊಂದಣಿಯಾದ ಸ್ವತ್ತು ಎಂದರೆ ಸರಿ . 1978 ರಲ್ಲಿ ಶಂಕರಪ್ಪ ನವರು ಕೆ ಎಸ್ ಆರ್ ಟಿ ಸಿ ಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ .

ಐಟಂ ನಂಬರ್ 4 ನನ್ನ ತಂದೆಯವರಿಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತು ಎಂದರೆ ಸರಿ . ನನ್ನ ತಂದೆ ಬದುಕಿದ್ದಾಗ ಕಾಲಕ್ಕೆ ಅವರು ಕ್ರಯ, ದಾನ, ವಿಲ್ ಬೇರೆ ಯಾವುದೇ ದಾಖಲಾತಿಗಳನ್ನು ಯಾರ ಹೆಸರಿನಲ್ಲಿ ಮಾಡಿರುವುದಿಲ್ಲ ಎಂದರೆ ಸರಿ . ಉದ್ದಂಡಹಳ್ಳಿ ಗ್ರಾಮದ ಸ.ನಂ. 11/2 ರಲ್ಲಿ 2 ಎಕರೆ 28 ವರೆ ಗುಂಟೆಯನ್ನು ದಿನಾಂಕಃ27.05.1972 ರಲ್ಲಿ ನನ್ನ ಹೆಸರಿನಲ್ಲಿ ಕ್ರಯಕ್ಕೆ ಪಡೆಯಲಾಗಿತ್ತು ಎಂದರೆ ಸರಿ .ಸದರಿ ಜಮೀನನ್ನು ದಿನಾಂಕಃ 04.02.2019 ರಲ್ಲಿ ನಾನು ಮತ್ತು ಶಂಕರಪ್ಪ ಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ . ಆ ಭಾಗದ ಪ್ರಕಾರ ನನಗೆ 2 ಎಕರೆ ಜಮೀನು ಮತ್ತು ಶಂಕರಪ್ಪ ನವರಿಗೆ 28 ಗುಂಟೆ ಭಾಗ ನೀಡಲಾಗಿತ್ತು ಎಂದರೆ ಸರಿ . ಸದರಿ ನಿ ಪಿ 6 ರ ನೋಂದಾಯಿತ ವಿಭಾಗಪತ್ರದಲ್ಲಿ ನಾವು ಒಟ್ಟು ಕುಟುಂಬದಲ್ಲಿ ಇದ್ದಾಗ ರೇವಣಸಿದ್ದಪ್ಪ ಬಿನ್ ಸಿದ್ದಲಿಂಗಯ್ಯ ನವರ ಒಟ್ಟು ಕುಟುಂಬದ ಹಣದಿಂದ ಕ್ರಯಕ್ಕೆ ಪಡೆದಿರುವ ಬಗ್ಗೆ ಹೇಳಲಾಗಿರುತ್ತದೆ ಎಂದರೆ ಸಾಕ್ಷಿ ಅದನ್ನು ನನಗೆ ಗೊತ್ತಿಲ್ಲದೇ ಬರೆಯಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಭಾಗಪತ್ರ ಬರೆಯುವಾಗ ನಾನು ಮಾಹಿತಿ ನೀಡಿರುವುದಿಲ್ಲ , ಅದನ್ನು ವಾದಿ ಬರೆಯಿಸಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ . ಸದರಿ

ವಿಭಾಗಪತ್ರವನ್ನು ನಾನು ಈ ದಿನದವರೆವಿಗೂ ಪ್ರಶ್ನೆ ಮಾಡಿರುವುದಿಲ್ಲ . ಸದರಿ ವಿಭಾಗಪತ್ರದಂತೆ ನಾನು ಮತ್ತು ನನ್ನ ತಮ್ಮ ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದೇವೆ ಎಂದರೆ ಸರಿ .

2019 ರ ವಿಭಾಗಪತ್ರವನ್ನು ಹೊರತುಪಡಿಸಿ ಬೇರೆ ಯಾವುದೇ ಭಾಗವನ್ನು ನಮ್ಮ ಕುಟುಂಬದಲ್ಲಿ ಮಾಡಿರುವುದಿಲ್ಲ ಎಂದರೆ ಸರಿ. ಈ ದಿನದವರೆಗೂ ದಾವಾ ಸ್ವತ್ತುಗಳಲ್ಲಿ ನಾವು ಒಟ್ಟಿಗೆ ಅನುಭವದಲ್ಲಿ ಇರುತ್ತೇನೆ ಎಂದರೆ ಸರಿ.ಸದರಿ ಸ್ವತ್ತಿನ ಖಾತೆಗಳು ಯಾರ ಹೆಸರಿಗೆ ಬರುತ್ತವೆ ಎಂದು ಕೇಳಿದರೆ ಸಾಕ್ಷಿ ದಾವಾ ಐಟಂ ನಂಬರ್ 1 ರ ಖಾತೆ ನನ್ನ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ . ಐಟಂ ನಂಬರ್ 2 ರ ಖಾತೆ ನನ್ನ ಮತ್ತು ವಾದಿಯ ಹೆಸರಿನಲ್ಲಿ ಜಂಟಿಯಾಗಿರುತ್ತದೆ ಎಂದು ನುಡಿಯುತ್ತಾರೆ . ಐಟಂ ನಂಬರ್ 3 ನನ್ನ ಹೆಸರಿನಲ್ಲಿ ಖಾತೆ ಇರುತ್ತದೆ . ಐಟಂ ನಂಬರ್ 4 ನನ್ನ ತಾತನ ಹೆಸರಿನಲ್ಲಿ ಖಾತೆ ಇರುತ್ತದೆ .

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**